

## ಮಹಿಳಾ ಸ್ಟ್ಯಾಂಡ್ ಅಪ್ ಕಾಮಿಡಿಯನ್ಸ್

# ನಗುವಿನ ಗಣಿ ಮಹಿಳಾಮಣಿ

**ಸಿಕ್ಕಾಪಟ್ಟೆ ನಗು ಸ್ವಲ್ಪ ಖಾರ ಚೂರು ತರ್ಲೆ**

**ಬಹುತೇಕ ಎಲ್ಲ ಕ್ಷೇತ್ರಗಳಲ್ಲಿಯೂ ಇರುವ ಹಾಗೆ ಸ್ಟ್ಯಾಂಡ್ ಅಪ್ ಕಾಮಿಡಿ ಜಗತ್ತಿನಲ್ಲಿಯೂ ಪುರುಷರೇ ಬಹುಸಂಖ್ಯಾತರು. ಆದರೆ ಆ ಭದ್ರಕೋಟೆಯನ್ನು ಭೇದಿಸಿ ನಗೆಗುಳಿಗೆ ಹಂಚುತ್ತಿರುವ ಮಹಿಳಾಮಣಿಯರ ಸೌಂಡೂ ಜೋರಾಗಿಯೇ ಇದೆ.**

■ **ಚೈತ್ರಿಕಾ ನಾಯ್ಕ ಹರ್ಗಿ**

ಕಾಂಡಿಮೆಂಟ್ಸ್‌ನಿಂದ ಹಿಡಿದು ಕಾಂಡೋಮ್, ಬಿನ್ ಲಾಡೆನ್‌ನಿಂದ ಹಿಡಿದು ಬೆಡ್ ರೂಂ, ಬ್ಯೂಟಿ ಪಾರ್ಲರ್, ಬ್ರಾ, ಬಿಕಿನಿಯಿಂದ ಶುರುವಾಗಿ ಬಾರ್‌ವರೆಗೆ, ಟ್ರಂಪ್‌ನಿಂದ ಹಿಡಿದು ಟಾಂಗಾವರೆಗೆ, ಲೈಂಗಿಕತೆ, ರಾಜಕೀಯ, ಧರ್ಮ, ಸಂಪ್ರದಾಯ, ಪ್ರಾದೇಶಿಕ ವಿಭಿನ್ನತೆ, ಮಹಿಳಾ ಸ್ವಾತಂತ್ರ್ಯ, ಮನುಷ್ಯನ ಸ್ವಾತಂತ್ರ್ಯ ಮತ್ತು ಸ್ವೇಚ್ಛೆ, ಪುರುಷ ಪ್ರಧಾನ ಸಮಾಜದ ಅಸೂಕ್ಷ್ಮತೆ, ಮಹಿಳಾ ಪರ ಕಾನೂನುಗಳ ದುರ್ಬಳಕೆ, ಪಕ್ಕದ ಮನೆ ಗಾಸಿಪ್, ಎನ್.ಆರ್.ಐ.ಗಳ ಡ್ರಾಮಾ, ಐಐಟಿ, ಐಐಎಂ ಎಂಜಿನಿಯರ್‌ಗಳಿಂದ ಶುರುವಾಗಿ ಸೆಲೆಬ್ರಿಟಿಗಳ ನೌಟಂಕಿ, ಬಾಲಿವುಡ್, ಕಾಸ್ಟ್ ಕೌಚಿಂಗ್, ಲೈಂಗಿಕ ಅಲ್ಪ ಸಂಖ್ಯಾತರು, ವಿಕಲ ಚೇತನರ ಬಗ್ಗೆ ನಮ್ಮ ಪೂರ್ವಗ್ರಹಪೀಡಿತ ನಡವಳಿಕೆ – ಹೀಗೆ 'ಎ' ಟು 'ಝಡ್'ವರೆಗೆ ಲೀಲಾಜಾಲವಾಗಿ ಜಾಲಾಡಿ ತಮ್ಮ ಓರೆನೋಟದಿಂದ ಜಗದ ಕೋರೆಯನ್ನು ವ್ಯಂಗ್ಯವಾಗಿ ಹಿಡಿದು ನಗೆಯುಕ್ಕಿಸಬಲ್ಲ ಚಾಣಾಕ್ಷರು ಇವರು.

ಸ್ಟ್ಯಾಂಡ್ ಅಪ್ ಕಾಮಿಡಿ ಅಂದಾಕ್ಷಣ ಮೈಕ್ ಮುಂದೆ ನಿಂತ ಹುಡುಗರ ಇಮೇಜೇ ಕಣ್ಮುಂದೆ ಕಟ್ಟುತ್ತದಲ್ಲ, ಆ ಇಮೇಜ್ ಅನ್ನು ಬ್ರೇಕ್ ಮಾಡಿ, ಸ್ಟ್ಯಾಂಡ್ ಅಪ್ ಕಾಮಿಡಿ ಲೋಕದಲ್ಲಿ ಮಹಿಳಾದನಿ ರಿಂಗಣಿಸುವಂತೆ ಮಾಡಿದ ನಗೆವನಿತೆಯರಿವರು. ಇಸ್ತ್ರಿ ಹೊಡೆದ ಮುಖದ ಮೇಲೂ ನಗೆಯ ನೆರಿಗೆ ಮೂಡಿಸುತ್ತಲೇ ಹಾಸ್ಯಲೋಕದಲ್ಲಿ ಹರಿತವಾದ ವ್ಯಂಗ್ಯದ ಮೂಲಕ ಸ್ತ್ರೀವಾದವನ್ನೂ ಒಂದು ಚಳವಳಿಯಾಗಿ ರೂಪಿಸುತ್ತಿರುವುದು ಇವರ ಅಗ್ಗಳಿಕೆ.

ಹೆಣ್ಣು ದೊಡ್ಡದಾಗಿ ಮಾತನಾಡಿದರೆ ವಾಚಾಳಿ, ಜೋರಾಗಿ ನಕ್ಕರೆ ತಾಟಕಿ, ಜಾಸ್ತಿ ಸಿಟ್ಟಾದರೆ ಶೂರ್ಪನಖಿ, ಇನ್ನು ಲೈಂಗಿಕ ವಿಚಾರಗಳನ್ನು ಸಾರ್ವಜನಿಕವಾಗಿ ಮಾಡಿದರೆ ಇಲ್ಲದ ಹೆಸರುಗಳೆಲ್ಲ ಬಂದು ಅಟಕಾಯಿಸಿಕೊಳ್ಳುತ್ತವೆ. ಈಗಲೂ 'ನಿನ್ನ ಈ ಸ್ವಾತಂತ್ರ್ಯಗಳೇನಿದ್ದರೂ ನಾಲ್ಕು ಗೋಡೆಯ ಒಳಗೆ' ಎಂಬ ಅಲಿಖಿತ ಸಂವಿಧಾನ ಜಾರಿಯಲ್ಲಿದೆ. ಆಯುಧಗಳಿಂದ ಗೆಲ್ಲಲಾಗದ ಕಾಠಿಣ್ಯವನ್ನು, ಹೋರಾಟದಿಂದ ಮಣಿಸಲಾಗದ ಕ್ರೌರ್ಯದ ಗೋಡೆಗಳನ್ನು ಹಾಸ್ಯದ ಮೂಲಕ ಸುಲಭವಾಗಿ ನಿವಾಳಿಸಿಬಿಡಬಹುದು. ಇದು ಹಾಸ್ಯಕ್ಕಿರುವ ವಿಶೇಷ ಶಕ್ತಿ. ಇಂಥ ಶಕ್ತಿಮದ್ದು ಹೆಣ್ಣುಮಕ್ಕಳ ಕೈಗೆ ಸಿಕ್ಕರೆ ಕೇಳಬೇಕೇ? ವೀರಾವೇಶದ ಭಾಷಣ ಮಾಡಿದರೆ ಜನರ ನಿರ್ಲಕ್ಷ್ಯಕ್ಕೆ ಗುರಿಯಾಗಬಹುದಾದ, ಸ್ವತಃ ರಸ್ತೆಗಿಳಿದು ಹೋರಾಡಿದರೆ ನಗೆಪಾಟಲಿಗೀಡಾಗಬಹುದಾದ ಎಷ್ಟೋ ಸೂಕ್ಷ್ಮಗಳನ್ನೆಲ್ಲ ಹಾಸ್ಯಚಟಾಕಿಯೆಂಬ ಪಟಾಕಿಯ ಬಾಲಕ್ಕೆ ಕಿಡಿ ಹಚ್ಚಿ ನಗುನಗುತ್ತಲೇ ಬೆಚ್ಚಿ ಬೀಳುವ ಹಾಗೆ ಸ್ಫೋಟಿಸುವ ಕಲೆಯನ್ನು ಕರತಲಾಮಲಕ ಮಾಡಿಕೊಂಡಿದ್ದಾರೆ ಈ ಹುಡುಗಿಯರು.

ಸ್ಟ್ಯಾಂಡ್ ಅಪ್ ಕಾಮಿಡಿ ಜಗತ್ತಿನಲ್ಲಿ ಮಹಿಳಾ ಕಾಮಿಡಿಯನ್‌ಗಳ ಸಂಖ್ಯೆ ಸಣ್ಣದೇ. ಆದರೆ ಅವರು ಎಬ್ಬಿಸುತ್ತಿರುವ ನಗೆಯ ಹವಾ ಖಂಡಿತ ಸಣ್ಣದಲ್ಲ. ತಮ್ಮದೇ ವಿಶಿಷ್ಟವಾದ ಶೈಲಿ, ಸಂವೇದನೆ, ವಸ್ತುಗಳ ಮೂಲಕ ಆನ್‌ಲೈನ್ ಜಗತ್ತಿನಲ್ಲಿ ಮೆರೆಯುತ್ತಿರುವ 'ಕಾಮಿಡಿ ರಾಣಿ'ಯರಲ್ಲಿ ಕೆಲವರನ್ನು ಪರಿಚಯ ಮಾಡಿಕೊಳ್ಳೋಣ, ಬನ್ನಿ...